ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2013–14ನೇ ಸಾಲಿನ

# ವಾರ್ಷಿಕ ವರದಿ







**ಡಾ: ಸಿ.ಜಿ.ಬೆಟಸೂರಮಠ ಕ.ಆ.ಸೇ.,**

ಆಯುಕ್ತರು

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,

ದೊಡ್ಡಕೆರೆ ಮೈದಾನ, ಮೈಸೂರು– 570010

# ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2013–14ನೇ ಸಾಲಿನ ವಾರ್ಷಿಕ ವರದಿ

ಪ್ರಸ್ತಾವಿಕ :

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವನ್ನು, 2004ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯೊಂದಿಗೆ ಸರ್ಕಾರಿ ಆದೇಶದ ಸಂಖ್ಯೆ: **ಕಸಂವಾಪ್ರ 10 ಕೆಎಂಯು 2012 ದಿನಾಂಕ 23–2–2012ರಲ್ಲಿ ವಿಲೀನಗೊಳಿಸಿ** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್‌ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಪ್ರಸುತ್ತ ಡಾ:ಸಿ.ಜಿ.ಬೆಟಸೂರಮಠ, ಕ.ಆ.ಸೇ., ಇವರು, ಇಲಾಖೆಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು **ಕಲೆ ಮತ್ತು ಸಂಸ್ಕೃತಿಗೆ** ಸಂಬಂಧಿಸಿದ **ಯೋಜನೆ** ಮತ್ತು **ಯೋಜನೇತರ** ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಇಲಾಖೆಯ ಮುಖ್ಯ ಕಾರ್ಯಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತು ಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿದೆ.

ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಜವಾಬ್ದಾರಿಯನ್ನು ಇಲಾಖೆಯು ನಿರ್ವಹಿಸುತ್ತಾ ಬರುತ್ತಿದೆ.

ಪಾರಂಪರಿಕ ಪ್ರದೇಶಗಳಾದ **ಮೈಸೂರು, ಶ್ರೀರಂಗಪಟ್ಟಣ, ಬೀದರ್, ಗುಲ್ಬರ್ಗಾ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ** ಒಟ್ಟು ಆರು ಪಾರಂಪರಿಕ ಪ್ರದೇಶಗಳ ಮತ್ತು ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. **ಇದಲ್ಲದೆ 2012–**

**13ನೇ ಸಾಲಿನ ಅಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕುಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮುಲೇಖೇಡ, ಮೇಲುಕೋಟೆ ಈ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ.**

ಇಲಾಖೆಯ ಆಡಳಿತದ ವ್ಯಾಪ್ತಿಯಲ್ಲಿ ನಿರ್ದೇಶಕರು (ಪ್ರಾಚ್ಯವಸ್ತು) ನಿರ್ದೇಶಕರು (ವಸ್ತುಸಂಗ್ರಹಾಲಯ) ಇದ್ದು, ಉಪನಿರ್ದೇಶಕರ ಕಛೇರಿ, ಮೈಸೂರು, (ಪರಂಪರೆ) ಗುಲ್ಬರ್ಗಾ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಇವೆ ಹಾಗೂ ಸರ್ಕಾರಿ ವಸ್ತುಸಂಗ್ರಹಾಲಯ ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಗುಲ್ಬರ್ಗಾ ರಾಯಚೂರು, ಹೂವಿನಹಡಗಲಿ ಸೇರಿದಂತೆ ಒಟ್ಟು ಹದಿನಾಲ್ಕು ಸಂಗ್ರಹಾಲಯಗಳು ಹಾಗೂ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಮತ್ತು ಅಥಣಿಯಲ್ಲಿ ಶಿಲ್ಪಗಳ ಗ್ಯಾಲರಿಯು ಒಳಪಟ್ಟಿದೆ.

## 1. ಸಿಬ್ಬಂದಿಯ ವಿವರಗಳು :

**ಟೇಬಲ್ – 1 ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಈ ಇಲಾಖೆಯ ಸಿಬ್ಬಂದಿಯ ವಿವರ**

| ಹುದ್ದೆಗಳ ವರ್ಗ | ಮಂಜೂರಾ ಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಖಾಲಿಯಿರುವ ಹುದ್ದೆಗಳು |
|---|---|---|---|---|---|---|---|
| ಎ | 13 | 7 | 6 | 1 | 3 | – | 6 |
| ಬಿ | 8 | 3 | 2 | 1 | – | – | 5 |
| ಸಿ | 84 | 56 | 37 | 19 | 15 | 10 | 28 |
| ಡಿ | 118 | 68 | 51 | 17 | 22 | 6 | 50 |
| ಒಟ್ಟು | 223 | 134 | 96 | 38 | 40 | 16 | 89 |

## 2. ವೃಂದ ಮತ್ತು ನೇಮಕಾತಿ ನಿಯಮಗಳು :

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28–2–1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು

ರಚಿಸಲಾಗಿತ್ತು. ಪ್ರಸ್ತುತ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಪುನರ್‌ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹಾಗೂ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲು ಸರ್ಕಾರಕ್ಕೆ ಪ್ರಸ್ತಾಪಿಸಲಾಗುತ್ತಿದೆ.

## 3. ಕಾಯ್ದೆ ಮತ್ತು ನಿಯಮಗಳು :

ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1. ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ 1961ರ ನಿಯಮಗಳು 1965.
2. ದಿ ಕರ್ನಾಟಕ ಟ್ರೆಜರ್ ಟ್ರೋವ್ ಕಾಯಿದೆ, 1962, ಅಂಡ್ ರೂಲ್ಸ್ 1963.
3. ಪಾರಂಪರಿಕ ಪ್ರದೇಶಗಳ ಸಂರಕ್ಷಣೆ ಕುರಿತಂತೆ ರಾಜ್ಯದ ನಗರ/ಪಟ್ಟಣಗಳ ವಲಯ ನಿಯಮಾವಳಿಗೆ ಕಲಂ 13 (ಇ) ರಡಿಯಲ್ಲಿ ತಿದ್ದುಪಡಿ ತರುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾಪಿಸಿದ್ದು ಇದು ಪರಿಶೀಲನೆಯಲ್ಲಿದೆ.

## 4. ಸಾರ್ವಜನಿಕ ಕುಂದು ಕೊರತೆಗಳು :

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಪರಿಗಣಿಸಲಾಗುತ್ತಿದೆ.

## 5. ಅಯ-ವ್ಯಯ :

**ಟೇಬಲ್-2 2013-14ನೇ ಸಾಲಿನ ಆಯವ್ಯಯದ ವಿವರಗಳು** (ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಶೀರ್ಷಿಕೆ | ಆಯುವ್ಯಯ ಅಂದಾಜು | ಪರಿಷ್ಕೃತ ಅಂದಾಜು | ಮಾರ್ಚ್2014ರ ವರೆಗೆ ವೆಚ್ಚ | ಶೇಕಡವಾರು |
|---|---|---|---|---|---|
| 1 | ಯೋಜನೆ | 5263.92 | 4563.92 | 3762.36 | 82.43% |
| 2 | ಯೋಜನೇತರ | 775.39 | 775.39 | 691.11 | 89.13% |
| | ಒಟ್ಟು | 6039.31 | 5339.31 | 4453.47 | 83.41% |

## 6. ಮುಂದುವರೆದ ಯೋಜನಾ ಕಾರ್ಯಕ್ರಮ:-

ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಎರಡನೇಯ ವಾರ್ಷಿಕ ವರ್ಷದ ಮುಂದುವರೆದ ಯೋಜನೆಯ ಕಾರ್ಯಕ್ರಮಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 121 ಕೆಎಂಯು 2013 ದಿನಾಂಕ 26-8-2013ರಲ್ಲಿ ಅನುಮೋದನೆ ದೊರೆತಿದೆ. ಅದರಂತೆ ಯೋಜನಾ ಬಾಬ್ತಿನಲ್ಲಿ ರೂ.5263.92ಲಕ್ಷ ಮಂಜೂರಾಗಿದ್ದು ಅದರಲ್ಲಿ ರೂ.4563.92ಲಕ್ಷ ಪರಿಷ್ಕೃತಗೊಳಿಸಿದ್ದು ಇದರಲ್ಲಿ ರೂ.3762.36ವೆಚ್ಚ ಮಾಡಲಾಗಿದ್ದು ಶೇಕಡಾ 82.43ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

## 7. ವಿಚಾರ ಸಂಕಿರಣಗಳು ಮತ್ತು ಛಾಯಾಚಿತ್ರ ವಸ್ತುಪ್ರದರ್ಶನಗಳು ಮತ್ತು ಸಮಾರಂಭಗಳು:

ವಿಚಾರ ಸಂಕಿರಣ :

1. **ಬಳ್ಳಾರಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಕುರಿತಂತೆ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಸಹಯೋಗದೊಂದಿಗೆ ಹಂಪಿಯಲ್ಲಿ ದಿನಾಂಕ 6-4-2013 ಮತ್ತು 7-4-2013ರಂದು ಎರಡು ದಿನಗಳ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

2. **ಹಾವೇರಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಕುರಿತಂತೆ ಶ್ರೀ ಶಿವಲಿಂಗೇಶ್ವರ ಮಹಿಳಾ ಮಹಾವಿದ್ಯಾಲಯ, ಹುಕ್ಕೇರಿಮಠ, ಹಾವೇರಿ ಇವರ ಸಹಯೋಗದೊಂದಿಗೆ ಹಾವೇರಿಯಲ್ಲಿ ದಿನಾಂಕ 25-4-2013 ಮತ್ತು 26-4-2013ರಂದು ಎರಡು ದಿನಗಳ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

3. ದಿನಾಂಕ 11 ಮತ್ತು 12ನೇ ಜನವರಿ 2014ರಂದು **ಹಂಪಿಯಲ್ಲಿ 19ನೇ ವಿಜಯನಗರ ಅಧ್ಯಯನ ಕುರಿತು** ವಿಚಾರ ಸಂಕಿರಣವನ್ನು ರೂ.3.50ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಯಿತು.

4. ದಿನಾಂಕ: 22/03/2014 ಮತ್ತು 23-03-2014ರಂದು ಹಂಪಿಯಲ್ಲಿ ದಕ್ಷಿಣ ಭಾರತೀಯ ನಾಣ್ಯಶಾಸ್ತ್ರ ಸಂಸ್ಥೆ ಸಹಯೋಗದೊಂದಿಗೆ **24ನೇ ವಾರ್ಷಿಕ ಸಮ್ಮೇಳನವನ್ನು** ರೂ. 5.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಯಿತು.

5. ದಿನಾಂಕ 15 ಮತ್ತು 16–3–2014ರಂದು ಶ್ರೀ ಸುದರ್ಶನ ನಾರಸಿಂಹ ಕ್ಷೇತ್ರ, ಮೈಸೂರು ಇವರ ಸಹಯೋಗದೊಂದಿಗೆ ಮೈಸೂರಿನಲ್ಲಿ **ಧರ್ಮ, ಸಾಹಿತ್ಯ ಮತ್ತು ಕಲೆಗಳಲ್ಲಿ ಮತ್ಸ್ಯಾವತಾರ** ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ರೂ. 3.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಯಿತು.

6. ಗುಂಡ್ಲುಪೇಟೆಯ ಜೆ.ಎಸ್.ಎಸ್. ಕಾಲೇಜು ಸಂಸ್ಥೆಯ ಸಹಯೋಗದೊಂದಿಗೆ **ಮೈಸೂರಿನ ದಿವಾನರು** ಕುರಿತ ವಿಚಾರ ಸಂಕಿರಣವನ್ನು ಕೈಗೊಳ್ಳಲು ರೂ. 3.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

7. ಶ್ರೀರಂಗಪಟ್ಟಣ ಪದವಿ ಕಾಲೇಜಿನ ಸಹಯೋಗದೊಂದಿಗೆ ಸಂಸ್ಕೃತಿ ಅರಿವಿಗೆ ಸಂಬಂಧಿಸಿದಂತೆ ಪಾರಂಪರಿಕ ವಿಚಾರ ಸಂಕಿರಣಗಳನ್ನು ಒಟ್ಟು ರೂ.50,000/–ವನ್ನು ಬಿಡುಗಡೆ ಮಾಡಲಾಗಿದೆ.

## 8. ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಆಚರಣೆ :

ಕರ್ನಾಟಕ ಇತಿಹಾಸ ಅಕಾಡೆಮಿ (ರಿ), **ಬೆಂಗಳೂರು** ಇವರ ಸಹಯೋಗದೊಂದಿಗೆ 16–8–2013ರಂದು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಆಚರಣೆಯನ್ನು ಹಾಗೂ ಇತಿಹಾಸ ದರ್ಶನ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಕೈಗೊಳ್ಳಲು ರೂ.2.00ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

ಈ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕ ಅಕಾಡೆಮಿ (ರಿ) ಬೆಂಗಳೂರು ಇವರ 27ನೇಯ ವಾರ್ಷಿಕ ಸಮ್ಮೇಳನವನ್ನು 2013 ಸೆಪ್ಟಂಬರ್ 21,22 ಮತ್ತು 23 ರಂದು ದಿ ಮಿಥಿಕ್ ಸೊಸೈಟಿ, ನೃಪತುಂಗರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ರೂ. 1.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

## 9. ಪಾರಂಪರಿಕ ನಡಿಗೆ :

1. 2013ರ ನಾಡಹಬ್ಬ ಮೈಸೂರು ದಸರಾ ಆಚರಣೆಯ ಸಂದರ್ಭದಲ್ಲಿ ದಿನಾಂಕ 7, 8, ಮತ್ತು 9ನೇ ಅಕ್ಟೋಬರ್ 2013ರಂದು **ಪಾರಂಪರಿಕ ನಡಿಗೆ** ಕಾರ್ಯಕ್ರಮವನ್ನು ಮೈಸೂರಿನಲ್ಲಿ ಕೈಗೊಳ್ಳಲಾಯಿತು.

2. ದಿನಾಂಕ 19–1–2014ರಂದು ಪೊಲೀಸ್ ಅಕಾಡೆಮಿಯ ಪ್ರಶಿಕ್ಷಣಾರ್ಥಿಗಳಿಗೆ ಪಾರಂಪರಿಕ ನಡಿಗೆಯನ್ನು ಏರ್ಪಡಿಸಲಾಗಿತ್ತು.

3. ದಿನಾಂಕ 30–1–2014 ಮತ್ತು 6–3–2014ರಂದು ಆಡಳಿತ ತರಬೇತಿ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳಿಗೆ ಪಾರಂಪರಿಕ ನಡಿಗೆಯನ್ನು ಏರ್ಪಡಿಸಲಾಗಿತ್ತು.

**10. ಪುರಾತತ್ವ ಛಾಯಾಚಿತ್ರ ಪ್ರದರ್ಶನ :**

ನಾಡಹಬ್ಬ ಮೈಸೂರು ದಸರಾ ಆಚರಣೆಯ ಅಂಗವಾಗಿ **"ಮೈಸೂರು ಶಿಲ್ಪಿ ನಾಲ್ವಡಿ ಕೃಷ್ಣರಾಜ ಒಡೆಯರ್ ಒಂದು ನೆನಪು"** ಎಂಬ ವಿಷಯ ಕುರಿತಂತೆ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

**11. ಸಾಕ್ಷ್ಯಚಿತ್ರ ಪ್ರದರ್ಶನ :**

2013 ದಸರಾ ಆಚರಣೆಯ ಸಂದರ್ಭದಲ್ಲಿ ಮೈಸೂರಿನ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ಪರಂಪರೆಗೆ ಸಂಬಂಧಪಟ್ಟಂತೆ ಪ್ರಮುಖ ಸಾಕ್ಷ್ಯ ಚಿತ್ರ ಪ್ರದರ್ಶನವನ್ನು ಉಚಿತವಾಗಿ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**12. ಪುಸ್ತಕ ಪ್ರದರ್ಶನ ಹಾಗೂ ಮಾರಾಟ :**

ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಮೂಲತ: ಒಂದು ಶೈಕ್ಷಣಿಕ ಇಲಾಖೆಯಾಗಿದ್ದು, ಸುಮಾರು 140ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಈ ಪುಸ್ತಕಗಳ ಪ್ರದರ್ಶನ ಹಾಗೂ ಶೇಕಡಾ 15 ರಿಂದ 50ರವರೆಗೆ ರಿಯಾಯಿತಿಯೊಂದಿಗೆ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ.

**13. ಸಂಶೋಧನಾ ಪ್ರಕಟಣೆಗಳು :**

2013–14ನೇ ಸಾಲಿನಲ್ಲಿ ಒಂದು ಪ್ರಕಟಣೆಯನ್ನು ಹೊರತಂದಿದ್ದು ಉಳಿದ ನಾಲ್ಕು ಪುಸ್ತಕಗಳು ಮುದ್ರಣದ ಹಂತದಲ್ಲಿದೆ. ಒಟ್ಟಾರೆ ರೂ.6.28ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

1. ವಿಜಯನಗರ ಅಧ್ಯಯನ ಸಂಪುಟ 18 ಎಂಬ ಗ್ರಂಥವನ್ನು ಹೊರತರಲಾಗಿದೆ.

2. ಹಂಪಿ ಉತ್ಖನನ ವರದಿ ಭಾಗ 1 ಮತ್ತು 2. (ಮುದ್ರಣದ ಹಂತದಲ್ಲಿದೆ.)
3. ಬೇಲೂರು, ಹಳೇಬೀಡು ಪರಂಪರೆ ಮಾಲಿಕೆ. (ಮುದ್ರಣದ ಹಂತದಲ್ಲಿದೆ.)
4. ಅಣ್ಣಿಗೇರಿ ಉತ್ಖನನ ವರದಿ. (ಮುದ್ರಣದ ಹಂತದಲ್ಲಿದೆ.)
5. ತಾಜ್ ಬಾವಡಿ (Historical & Scientific Water Mappings) (ಮುದ್ರಣದ ಹಂತದಲ್ಲಿದೆ.)

## 14. ಚಿತ್ರಕಲೆಗಳ ಪ್ರದರ್ಶನ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ:

ಮೈಸೂರಿನ ದಸರಾ ಸಂದರ್ಭದಲ್ಲಿ ಇಲಾಖೆಯ ಒಳ ಆವರಣದಲ್ಲಿ ಮೂರು ಹೊಸ ಗ್ಯಾಲರಿಗಳನ್ನು ತೆರೆದು, ಮೊದಲನೇ ಗ್ಯಾಲರಿಯಲ್ಲಿ ಮೈಸೂರು ರಾಜಮನೆತನದ ಅಮೂಲ್ಯ ಛಾಯಾಚಿತ್ರ ಪ್ರದರ್ಶನ, 2ನೇ ಗ್ಯಾಲರಿಯಲ್ಲಿ ಮೈಸೂರು ಶೈಲಿಯ ವರ್ಣಚಿತ್ರಕಲೆಗಳನ್ನು ಹಾಗೂ 3ನೇ ಗ್ಯಾಲರಿಯಲ್ಲಿ ಹಂಪಿ ಗತವೈಭವದ ನೆನಪಿಗಾಗಿ **"ಹಂಪಿ ಅಂದು ಮತ್ತು ಇಂದು"** ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಹಾಗೂ ಪರಂಪರೆಗೆ ಸಂಬಂಧಪಟ್ಟಂತೆ ಉಚಿತ ಪ್ರಮುಖ ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಯಿತು.

## 15. ಪಾರಂಪರಿಕ ಕೂಟ :

ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯ ವತಿಯಿಂದ ವಿವಿಧ ಶೈಕ್ಷಣಿಕ ಸಂಸ್ಥೆಯ ಸಹಯೋಗದೊಂದಿಗೆ 58 ಪರಂಪರಾ ಕೂಟಗಳನ್ನು ರೂ. 6.50 ಲಕ್ಷ ವೆಚ್ಚದಲ್ಲಿ ಏರ್ಪಡಿಸಲಾಗಿತ್ತು.

## 16. ಕಾರ್ಯಾಗಾರ :

1. ಆಡಳಿತ ತರಬೇತಿ ಸಂಸ್ಥೆ ಹಾಗೂ ಇನ್ನಿತರ ಇಲಾಖೆಯ ಸಹಯೋಗದೊಂದಿಗೆ ಪರಂಪರೆ ಸಂರಕ್ಷಣೆ ನಿರ್ವಹಣೆ ಕಾರ್ಯಾಗಾರವನ್ನು ಇಲಾಖೆಯ ಅಧಿಕಾರಿಗಳಿಗೆ ದಿನಾಂಕ 2014ನೇ ಜನವರಿ 4 ಮತ್ತು 5 ರಂದು ಮೈಸೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಇಲಾಖೆಯ ಆಯುಕ್ತರಾದ ಡಾ: ಸಿ.ಜಿ. ಬೆಟಸೂರಮಠ, ಇವರು ತಲಕಾಡಿನ ಅಧ್ಯಯನ ಕುರಿತಂತೆ ಪ್ರಾತ್ಯಕ್ಷತೆಯ ಮೂಲಕ ಉಪನ್ಯಾಸವನ್ನು ನೀಡಿದರು ಮತ್ತು ಒಂದು ತಾಂತ್ರಿಕ ಸೆಷನ್ ಅಧ್ಯಕ್ಷತೆಯನ್ನು ವಹಿಸಿದರು ಹಾಗೂ ಈ ಸಂದರ್ಭದಲ್ಲಿ ಪುರಾತತ್ವ ಛಾಯಾಚಿತ್ರ ಪ್ರದರ್ಶನವನ್ನು ಕೂಡ ಏರ್ಪಡಿಸಲಾಗಿತ್ತು.

2. ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು, ಕೆ.ಯು.ಐ.ಡಿ.ಎಫ್.ಸಿ. ಬೆಂಗಳೂರು ಮತ್ತು ಐ.ಹೆಚ್.ಸಿ.ಎನ್. ಮೈಸೂರು ಇವರ ಸಹಯೋಗದೊಂದಿಗೆ ಪರಂಪರೆ ಸಂರಕ್ಷಣೆ ನಿರ್ವಹಣೆ ಕುರಿತಂತೆ ದಿನಾಂಕ 22-2-2014ರಂದು ಬೆಂಗಳೂರಿನ ವಿಕಾಸಸೌಧ ಸಭಾಂಗಣದಲ್ಲಿ ನಡೆದ ಒಂದು ದಿನದ ಕಾರ್ಯಾಗಾರಕ್ಕೆ ಈ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಾಂತ್ರಿಕ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಸದರಿ ಕಾರ್ಯಗಾರದಲ್ಲಿ Urban Planing and Heritage ಕುರಿತು ಆಯುಕ್ತರಾದ ಡಾ: ಸಿ.ಜಿ. ಬೆಟಸೂರಮಠ, ಇವರು ಉಪನ್ಯಾಸ ನೀಡಿದರು.

## 17. ಹೊಸ ವಸ್ತುಸಂಗ್ರಹಾಲಯದ ಸ್ಥಾಪನೆ :

ಮೈಸೂರು ಜಿಲ್ಲೆ ಯಳಂದೂರು ತಾಲ್ಲೋಕಿನ ಯಳಂದೂರಿನಲ್ಲಿ ದಿನಾಂಕ 5-3-2014 ರಂದು ದಿವಾನ್ ಪೂರ್ಣಯ್ಯ ಸರ್ಕಾರಿ ವಸ್ತುಸಂಗ್ರಹಾಲಯದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

## 18. ಉತ್ಖನನ :

ಪ್ರಸಕ್ತ ಸಾಲಿನಲ್ಲಿ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೋಕು ಕುಂತಿ ದಿಬ್ಬದಲ್ಲಿ ಇಲಾಖಾ ವತಿಯಿಂದ ಉತ್ಖನನವನ್ನು ಕೈಗೊಳ್ಳಲಾಗುತ್ತಿದೆ.

## 19. ಸಂರಕ್ಷಣಾ ಕಾಮಗಾರಿ :

ಇಲಾಖೆಯು ಕೈಗೊಳ್ಳುವ ಸಂರಕ್ಷಣಾ ಕಾಮಗಾರಿಗಳನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆದು ಇ-ಟೆಂಡರ್ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಅ) ರಾಜ್ಯ ಯೋಜನೆ ಅಡಿಯಲ್ಲಿ 33 ಮುಂದುವರಿದ ಸಂರಕ್ಷಣಾ ಕಾಮಗಾರಿಗಳನ್ನು ರೂ.**354.31 ಲಕ್ಷ**ಗಳನ್ನು ವೆಚ್ಚ ಮಾಡಿ ಕೈಗೊಳ್ಳಲಾಗಿದೆ.

ಆ) ಹೊಸ ಕಾಮಗಾರಿ ಅಡಿಯಲ್ಲಿ 40 ಕಾಮಗಾರಿಗಳಿಗೆ ರೂ.354.95 **ಲಕ್ಷ**ಗಳನ್ನು ವೆಚ್ಚ ಮಾಡಿ ಕೈಗೊಳ್ಳಲಾಗಿದೆ.

ಇ) ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೂ.355.82ಲಕ್ಷ ವೆಚ್ಚ ಮಾಡಿ 55 ಕಾಮಗಾರಿಯನ್ನು ಮುಂದುವರೆಸಲಾಗಿದೆ.

ಈ) ಗಿರಿಜನ ಉಪಯೋಜನೆ ಅಡಿಯಲ್ಲಿ ರೂ.111.20ಲಕ್ಷ ವೆಚ್ಚ ಮಾಡಿ 13 ಕಾಮಗಾರಿಗಳನ್ನು ಕೈಗೊಳ್ಳಲಾಯಿತು.

## 20. 13ನೇ ಹಣಕಾಸು ಆಯೋಗದ ಅನುದಾನ :

ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಈ ಯೋಜನೆಯನ್ನು 2011–12ನೇ ಸಾಲಿನಿಂದ ಆರಂಭಿಸಲಾಗಿದ್ದು ಒಟ್ಟಾರೆ 137 ಕಾಮಗಾರಿಗಳನ್ನು ಕೈಗೊಳ್ಳಲು 100.00 ಕೋಟಿ ಅನುದಾನದ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿದೆ.

ಟೇಬಲ್ – 3 ಕಾಮಗಾರಿಗಳ ವಿವರಗಳು :

| ಕ್ರಮ ಸಂಖ್ಯೆ | ಸ್ಮಾರಕಗಳ ವಿವರಗಳು | ಕಾಮಗಾರಿಯ ಸಂಖ್ಯೆ: |
|---|---|---|
| 1 | ದೇವಸ್ಥಾನಗಳು | 101 |
| 2 | ಅರಮನೆ | 02 |
| 3 | ಕೋಟೆಗಳು | 15 |
| 4 | ಪ್ರಾಚೀನ ನಿವೇಶನಗಳು | 01 |
| 5 | ಮಂಟಪಗಳು | 02 |
| 6 | ಬಸದಿ | 03 |
| 7 | ಕಲ್ಯಾಣಿ | 02 |
| 8 | ಗುಮ್ಮಟಗಳು | 10 |
| 9 | ಸಮಾಧಿ | 01 |
| | ಒಟ್ಟು | 137 |

2013–14ನೇ ಸಾಲಿನ ಅಂತ್ಯದ ವರೆಗೆ 118 ಕಾಮಗಾರಿಗಳನ್ನು ಕೈಗೊಂಡು ರೂ.49.99ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ 20 ಕಾಮಗಾರಿಗಳು ಪೂರ್ಣಗೊಂಡಿದೆ.

## 21. ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ ಯೋಜನೆ :

11 ವಸ್ತು ಸಂಗ್ರಹಾಲಯವನ್ನು ರೂ. 49.82ಲಕ್ಷವನ್ನು ವೆಚ್ಚ ಮಾಡಿ ಅಭಿವೃದ್ಧಿಪಡಿಸಲಾಗಿದೆ

ಟೇಬಲ್ – 4 ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ ವಿವರ :

| ಕ್ರಮ ಸಂಖ್ಯೆ | ವಸ್ತು ಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿಗಳು | ವೆಚ್ಚ ರೂ.ಲಕ್ಷಗಳಲ್ಲಿ |
|---|---|---|
| 1. | ಮೈಸೂರಿನ ವೆಲ್ಲಿಂಗ್‌ಟನ್ ವಸ್ತುಸಂಗ್ರಹಾಲಯದ ಅಭಿವೃದ್ಧಿ | 2.00 |
| 2. | ಶ್ರೀರಂಗಪಟ್ಟಣ ಚಾಮರಾಜ ವಸ್ತುಸಂಗ್ರಹಾಲಯದ ಅಭಿವೃದ್ಧಿ | 6.39 |
| 3. | ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆಯ ಅಭಿವೃದ್ಧಿ | 1.97 |
| 4. | ಶಿವಮೊಗ್ಗ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ. | 7.73 |
| 5. | ಮಡಿಕೇರಿ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ. | 3.08 |
| 6. | ಮಂಗಳೂರು ವಸ್ತುಸಂಗ್ರಹಾಲಯದ ಅಭಿವೃದ್ಧಿ | 0.96 |
| 7. | ಕಿತ್ತೂರು ವಸ್ತುಸಂಗ್ರಹಾಲಯದ ಅಭಿವೃದ್ಧಿ | 9.02 |
| 8. | ಗದಗ ವಸ್ತುಸಂಗ್ರಹಾಲಯದ ಅಭಿವೃದ್ಧಿ | 5.81 |
| 9. | ಗುಲ್ಬರ್ಗಾ ವಸ್ತುಸಂಗ್ರಹಾಲಯದ ಅಭಿವೃದ್ಧಿ | 5.00 |
| 10. | ಹೂವಿನ ಹಡಗಲಿ ವಸ್ತುಸಂಗ್ರಹಾಲಯದ ನಿರ್ವಹಣೆ | 0.93 |
| 11. | ಇತರ ವಸ್ತುಸಂಗ್ರಹಾಲಯದ ನಿರ್ವಹಣೆ | 6.93 |
| | **ಒಟ್ಟು** | **49.82** |

## 22. ಇಲಾಖೆಯ ವೆಬ್‌ಸೈಟ್ :

1. ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಭಾರತ ಸರ್ಕಾರ ಸರ್ವರ್ ಹೋಸ್ಟಿಂಗ್ 2 ವರ್ಷಗಳ ಅವಧಿಗೆ ಮತ್ತು 2 ಜಿ.ಬಿ. ಸ್ಪೇಸ್‌ನೊಂದಿಗೆ ಇಲಾಖೆಯ ನೋಂದಣಿಯನ್ನು ಮಾಡಿಸಲಾಗಿದೆ. ಈ ವೆಬ್‌ಸೈಟ್ ವಿಳಾಸ http://www.karnatakaarchaeology.gov.in ಯನ್ನು ನೊಂದಣಿ ಮಾಡಲಾಗಿದೆ.

2. ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯು ಈ ಇಲಾಖೆಗೆ ನೀಡಿರುವ ಸೈಟ್‌ಮ್ಯಾಪ್ ಮಾರ್ಗದರ್ಶನದನ್ವಯ ಇಲಾಖೆಯ ವೆಬ್‌ಸೈಟ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಈ ವೆಬ್‌ಸೈಟ್‌ನಲ್ಲಿ ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು, ಕಳೆದ ಮೂರು ವರ್ಷಗಳಲ್ಲಿ ಇಲಾಖೆ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ನಾಗರೀಕ ಸನ್ನದ್ದು (citizen charter), ಫಲಿತಾಂಶ ಚೌಕಟ್ಟು ದಾಖಲೆ (RFD)

ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಗೆ ಸಂಬಂಧಪಟ್ಟ ಪ್ರಮುಖ ಆದೇಶಗಳು, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Events), ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಆಕ್ಷೇಪಣೆ ಮತ್ತು ಮಾಹಿತಿಗಾಗಿ Queary ಸಲ್ಲಿಸಬಹುದಾಗಿದೆ, ಎಫ್.ಎ.ಕ್ಯೂ ಇನ್ನಿತರ ಮಾಹಿತಿಯನ್ನು ಒಳಗೊಂಡಿರುತ್ತದೆ. ಈ ವೆಬ್‌ಸೈಟ್‌ನ್ನು ಎಲ್ಲಾ ಭಾಷೆಗಳಿಗೂ ಭಾಷಂತರಿಸಬಹುದಾಗಿದೆ.

3. ಇಲಾಖೆಯ ಈ ವೆಬ್‌ಸೈಟ್‌ನ್ನು http://www.karnatakaarchaeology.gov.in ದೇಶದ ಎಲ್ಲಾ ಭಾಷೆಗಳಲ್ಲಿ ಸರ್ಚ್ ಮಾಡಿದರು ಮೊದಲ ಆದ್ಯತೆಯ ಮೇರೆಗೆ ದೊರೆಯುವ ರೀತಿಯಲ್ಲಿ ಕ್ರಮವಹಿಸಿದೆ. ಉದಾ: ಯಾಹೂ ಮತ್ತು ಗೂಗಲ್ ಸರ್ಚ್ ಇಂಜಿನ್‌ನಲ್ಲಿ ಯಾವುದೇ ದೇಶದ ಭಾಷೆಯಲ್ಲಿ ಇಲಾಖೆಯ ವೆಬ್‌ಸೈಟ್ ಸರ್ಚ್ ಮಾಡಿದರೂ ಕೂಡ ಪ್ರಥಮ ಪೇಜ್‌ನಲ್ಲಿಯೇ ಮಾಹಿತಿಯನ್ನು ಪಡೆಯಬಹುದು. ಇದಲ್ಲದೆ ಈ ವೆಬ್‌ಸೈಟ್‌ನಲ್ಲಿ ಸೋಷಿಯಲ್ ನೆಟ್‌ವರ್ಕಿಂಗ್ ಸೈಟ್‌ಗಳಾದ ಫೇಸ್‌ಬುಕ್, ಟ್ವಿಟರ್‌ನ ಲಿಂಕ್ ನೀಡಿದ್ದು ಇಲಾಖೆಯ ಕುರಿತಂತೆ ಚಾಟಿಂಗ್ ವ್ಯವಸ್ಥೆಯನ್ನು ಸಹ ನೀಡಲಾಗಿದೆ.

## 23. ಯೋಜನೇತರ ಕಾರ್ಯಕ್ರಮಗಳು :

ಸ್ಮಾರಕಗಳ ಸಂರಕ್ಷಣೆ : 2 ಕಾಮಗಾರಿಗಳನ್ನು ರೂ.6.94ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

## 24. ಖಾಸಗೀ ಸಹಭಾಗಿತ್ವ :

ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಸಹಯೋಗದೊಂದಿಗೆ 18 ಸ್ಮಾರಕಗಳ ಸಂರಕ್ಷಣೆಗಾಗಿ ರೂ. 90.00ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

## 25. ಸ್ಮಾರಕಗಳ ಸ್ವಚ್ಛತೆ ಕಾರ್ಯಕ್ರಮ :

ರಾಷ್ಟ್ರೀಯ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ರೂ.35,000/–ವೆಚ್ಚದಲ್ಲಿ 7 ಸ್ಮಾರಕಗಳ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

## 26. ಸಹಾಯಾನುದಾನ :

1. 2013–14ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ಯೋಜನೆ ಬಾಬ್ತಿನಲ್ಲಿ ರೂ. 43.00 ಲಕ್ಷವನ್ನು ಯೋಜನೇತರ ಬಾಬ್ತಿನಡಿಯಲ್ಲಿ ರೂ. 33.20ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ.

2. Indian Heritage Cities Network Foundation, Mysore ಸಂಸ್ಥೆಯ ಪಾರಂಪರಿಕ ಕಾರ್ಯ ಚಟುವಟಿಕೆಗಳಿಗೆ ಇಲಾಖೆಯ ವತಿಯಿಂದ ರೂ. 26.00 ಲಕ್ಷವನ್ನು (3ನೇ ಕಂತು) ಸರ್ಕಾರಿ ಆದೇಶದ ಸಂಖ್ಯೆ: ಕಸಂವಾ 33 ಕೆಎಂಯು 2014 ದಿನಾಂಕ 21–3–2014ರ ಮೇರೆಗೆ ಬಿಡುಗಡೆ ಮಾಡಲಾಗಿದೆ.

3. 2013–14ನೇ ಸಾಲಿನ ಅಯವ್ಯಯ ಘೋಷಣೆ ಮೇರೆಗೆ ಕೋಟಿ ಚೆನ್ನಯ್ಯ ಜನ್ಮ ಸ್ಥಳವಾದ ಪುತ್ತೂರು ತಾಲ್ಲೋಕಿನ ಪಡುಮಲೈನಲ್ಲಿ ಅವರು ಹುಟ್ಟಿ ಬೆಳೆದ ಕುರುಹುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರಿ ಆದೇಶದ ಸಂಖ್ಯೆ: ಕಸಂವಾ 287 ಕೆಎಂಯು 2013 ದಿನಾಂಕ 6–2–2014ರ ಮೇರೆಗೆ ರೂ. 50.00 ಲಕ್ಷವನ್ನು ಜಿಲ್ಲಾಧಿಕಾರಿ, ದಕ್ಷಿಣಕನ್ನಡ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿದೆ.

## 27. ಫಲಿತಾಂಶ ಚೌಕಟ್ಟು ದಾಖಲೆ (R.F.D) :

2013-14ನೇ ಸಾಲಿಗೆ ಈ ಇಲಾಖೆಯಿಂದ ಫಲಿತಾಂಶ ಚೌಕಟ್ಟು ದಾಖಲೆ ಅಡಿಯಲ್ಲಿ ನಿಗಧಿಪಡಿಸಿಕೊಂಡ ಗುರಿ ಹಾಗೂ ಸಾಧನೆಯ ವಿವರಗಳ ಅಂಕಿಅಂಶಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಟೇಬಲ್ – 5 ಆರ್.ಎಫ್.ಡಿ. ಸಾಧನೆ ವಿವರಗಳು :

| ಕ್ರಮ ಸಂಖ್ಯೆ | ವಿಷಯ | ಗುರಿ | ಸಾಧನೆ |
|---|---|---|---|
| 1 | ಪ್ರಾಚೀನ ನಿವೇಶನಗಳ ಉತ್ಖನನ/ಸ್ಮಾರಕಗಳು | 03 | 07 |
| 2 | ಪ್ರಾಚೀನ ನಿವೇಶನಗಳ ಸರ್ವೇಕ್ಷಣೆ | 40 | 115 |
| 3 | ಸ್ಮಾರಕಗಳೆಂದು ಘೋಷಿಸಿರುವುದು | 16 | 05 |
| 4 | ಸ್ಮಾರಕಗಳನ್ನು ಸಂರಕ್ಷಿಸಿರುವುದು | 50 | 58 |

| | | | |
|---|---|---|---|
| 5 | ಖಾಸಗಿ ಸಹಭಾಗೀತ್ವದ ಅಡಿಯಲ್ಲಿ ಸ್ಮಾರಕಗಳನ್ನು ಸಂರಕ್ಷಿಸಿರುವುದು. | 10 | 13 |
| 6 | ಪಾರಂಪರಿಕ ಪ್ರದೇಶಗಳನ್ನು ದಾಖಲೀಕರಣ ಮಾಡಿರುವುದು | 10 | 12 |
| 7 | ಪಾರಂಪರಿಕ ಕೂಟಗಳನ್ನು ಏರ್ಪಡಿಸಿರುವುದು | 260 | 175 |
| 8 | ವಸ್ತುಸಂಗ್ರಹಾಲಯಗಳ ಅಭಿವೃದ್ಧಿ | 16 | 17 |
| 9 | ಕಲಾತ್ಮಕ ಮತ್ತು ಪುರಾತತ್ವ ಮಾದರಿಗಳನ್ನು ಸಂಗ್ರಹಿಸಿರುವುದು | 100 | 110 |

## 28. ರಾಜಸ್ವ ಸ್ವೀಕೃತಿ :

2013–14 ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಈ ಕೆಳಕಂಡಂತೆ ರಾಜಸ್ವ ಸ್ವೀಕೃತಿಯನ್ನು ಮಾಡಲಾಗಿದೆ.

ಟೇಬಲ್–6 : ರಾಜಸ್ವ ಸ್ವೀಕೃತಿ ವಿವರ :

| ಕ್ರಮ ಸಂಖ್ಯೆ | ವಿವಿಧ ಮೂಲಗಳು | ರಾಜಸ್ವ ಸ್ವೀಕೃತಿ ರೂ. ಲಕ್ಷಗಳಲ್ಲಿ |
|---|---|---|
| 1) | ವಸ್ತುಸಂಗ್ರಹಾಲಯಗಳ ಪ್ರವೇಶ ದರ ಹಾಗೂ ಇತರ ಬಾಬ್ತಿನಿಂದ ಬಂದ ಮೊಬಲಗು | 4.60 |
| 2) | ಸಂಶೋಧನಾ ಪ್ರಕಟಣೆಗಳ ಮಾರಾಟದಿಂದ ಬಂದ ಮೊಬಲಗು | 6.50 |
| 3) | ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಮೊಬಲಗು | 0.02 |
| | **ಒಟ್ಟು** | **11.12** |

## 29. 2013–14ನೇ ಸಾಲಿನಲ್ಲಿ ವಿಧಾನಸಭೆ/ವಿಧಾನ ಪರಿಷತ್/ಭರವಸೆ/ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:

## ಟೇಬಲ್ – 7 : ವಿವರಣಾ ಪಟ್ಟಿ

| ಕ್ರಮ ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಲೋಕಸಭಾ ಪ್ರಶ್ನೆ | ಭರವಸೆ | | ಗಮನ ಸೆಳೆಯುವ ಸೂಚನೆಗಳು |
|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | |
| 1) | ಆಡಳಿತಾತ್ಮಕ ವಿಷಯ | 34 | 17 | 1 | – | – | 2 |
| 2) | ಸಂರಕ್ಷಣಾ ವಿಭಾಗ | 19 | 6 | – | 13 | 2 | 1 |
| 3) | ಅಯವ್ಯಯ ವಿಭಾಗ | 2 | 2 | – | – | – | – |
| 4) | ಪರಂಪರೆ ವಿಭಾಗ | 4 | 2 | 2 | – | – | – |
| **ಒಟ್ಟು** | | **59** | **27** | **3** | **13** | **2** | **3** |

### 30. ಮಾಹಿತಿ ಹಕ್ಕು ಅಧಿನಿಯಮ :

ಇದರಡಿಯಲ್ಲಿ ಒಟ್ಟು 93 ಅರ್ಜಿಗಳನ್ನು ಸ್ವೀಕರಿಸಿದ್ದು, ಅದಕ್ಕೆ ಉತ್ತರಿಸಲಾಗಿದೆ.

### 31. ವಿಶ್ವಪರಂಪರೆ ತಾತ್ಕಾಲಿಕ ಪಟ್ಟಿಗೆ ಕರ್ನಾಟಕದ ಮೂರು ತಾಣಗಳು:

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕರ್ನಾಟಕದಿಂದ ಈ ಕೆಳಕಂಡ ಮೂರು ಪ್ರಸ್ತಾವನೆಗಳನ್ನು ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ (UNESCO World Heritage Sites) ಸೇರಿಸಲು ಫೆಬ್ರವರಿ 2014ರಲ್ಲಿ ವಿಶ್ವ ಪರಂಪರೆಯ ಸಲಹಾ ಸಮಿತಿಗೆ (ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆ ಸಲ್ಲಿಸಲಾಗಿತ್ತು.

1) MONUMENTS AND FORTS OF DECCADN SULTANATE
   (Deccan Sultanate Architecture including Gulbarga, Bidar and Bijapur)

2) MONUMENTS OF SRIRANGAPATNA ISLAND TOWN
   (Srirangapatna)

3) SACRED ENSEMBLES OF THE HOYSALA
   (Hoysala Architecture series including Belur and Halebidu)

ಭಾರತದ ತಾತ್ಕಾಲಿಕ ಪಟ್ಟಿ ಪರಿಷ್ಕರಣಿ ಪ್ರಕ್ರಿಯೆಯ ಮೊದಲ ಹಂತ 15–04–2014 ರಂದು ಯಶಸ್ವಿಯಾಗಿ ಜರುಗಿದ್ದು ಇಲಾಖೆಯಿಂದ ಕಳುಹಿಸಲಾದ ಮೇಲ್ಕಂಡ ಪ್ರಸ್ತಾವನೆಯನು ಸಮಿತಿಯು ಅಂಗೀಕರಿಸಿ ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ ಸೇರ್ಪಡೆ ಮಾಡಿದೆ. ಈ ಮಾಹಿತಿಯನ್ನು ಯುನೆಸ್ಕೋ ಸಂಸ್ಥೆಯ ವೆಬ್‌ಸೈಟ್ http://whc.unesco.org/en/tentativelists/state=inನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಈ ಬಗ್ಗೆ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿ ಇವರಿಂದ ಮಾಹಿತಿ ಬಂದಿರುತ್ತದೆ.

ಈ ತಾಣಗಳ ಪ್ರದೇಶಗಳಲ್ಲಿ ಮುಂದಿನ ವಿವರವಾದ ಯೋಜನೆಗಳನ್ನು ಸಿದ್ಧಪಡಿಸುವ ಕುರಿತು ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯವು ನಮ್ಮ ಇಲಾಖೆಗೆ ನಿರ್ದೇಶನ ನೀಡಿದೆ ಮತ್ತು ಈ ದಿಶೆಯಲ್ಲಿ ಇಲಾಖೆಯು ಕಾರ್ಯೋನ್ಮುಖವಾಗಿದೆ.

## 32. ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು :

1. ಭಾರತೀಯ ಪುರಾತತ್ವ ನಗರಗಳ ಜಾಲದ ನಾಲ್ಕನೇ ದ್ವಿವಾರ್ಷಿಕ ಸಮ್ಮೇಳನವು ಯುನೆಸ್ಕೋ ಸಹಯೋಗದೊಂದಿಗೆ Economic of living Heritage ಎಂಬ ವಿಷಯ ಕುರಿತಂತೆ ದಿನಾಂಕ 20 ರಿಂದ 22ನೇ ನವಂಬರ್ 2013ರವರೆಗೆ ಪುಣೆಯಲ್ಲಿ ಜರುಗಿತ್ತು. ಈ ಸಮ್ಮೇಳನಕ್ಕೆ ಇಲಾಖಾ ವತಿಯಿಂದ ಆಯುಕ್ತರು, ನಿರ್ದೇಶಕರು, (ಪ್ರಾಚ್ಯವಸ್ತು) ಹಾಗೂ ತಾಂತ್ರಿಕ ಸಹಾಯಕರು ಭಾಗವಹಿಸಿದ್ದರು.

2. Indian Institute of Human settlements ಸಂಸ್ಥೆಯಿಂದ Short course on Protecting managing living Urban Heritage ತರಬೇತಿಯನ್ನು ಬೆಂಗಳೂರಿನ ಈ ಸಂಸ್ಥೆಯ ಆವರಣದಲ್ಲಿ ದಿನಾಂಕ 27–8–2013ರಿಂದ 31–8–2013ರವರೆಗೆ 5 ದಿವಸಗಳ ತರಬೇತಿ ನಡೆದಿದ್ದು, ಈ ತರಬೇತಿಗೆ ಇಲಾಖೆಯ ವತಿಯಿಂದ ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಉತ್ತರ ವಲಯ ಹಾಗೂ ದಕ್ಷಿಣ ವಲಯ ಇವರುಗಳು ಭಾಗವಹಿಸಿದ್ದರು.

**33. ಪಾರಂಪರಿಕ ಸಮಿತಿ:**

1. ಬಿಜಾಪುರ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ತಜ್ಞರ ಸಮಿತಿಯನ್ನು ಸರ್ಕಾರದ ಆದೇಶದ ಸಂಖ್ಯೆ ಕಸಂವಾಪ್ರ 69 ಕೆಎಂಯು 2013 ದಿನಾಂಕ 15–5–2013 ರಲ್ಲಿ ದಿನಾಂಕ 3–4–2013ರಿಂದ 2–4–2015ರವರೆಗೆ 2 ವರ್ಷಗಳ ಅವಧಿಗೆ ಮುಂದುವರಿಸಿ ಆದೇಶಿಸಿದೆ.

2. ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ತಜ್ಞರ ಸಮಿತಿಯನ್ನು ಸರ್ಕಾರದ ಆದೇಶದ ಸಂಖ್ಯೆ ಕಸಂವಾಪ್ರ 390 ಕೆಎಂಯು 2013 ದಿನಾಂಕ 6–4–2013 ರಲ್ಲಿ ದಿನಾಂಕ 22–1– 2013ರಿಂದ 21–1–2015ರವರೆಗೆ 2 ವರ್ಷಗಳ ಅವಧಿಗೆ ಮುಂದುವರಿಸಿ ಆದೇಶಿಸಿದೆ.

**34. ತಾಂತ್ರಿಕ ಸಲಹಾ ಸಮಿತಿ ಸದಸ್ಯರು :**

ಇಲಾಖೆಯು ಕೈಗೊಳ್ಳುವ ಸಂರಕ್ಷಣಾ ಕಾಮಗಾರಿಗಳನ್ನು ಪರಿಶೀಲಿಸಿ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಲು ಈ ಕೆಳಕಂಡ ತಜ್ಞರ ತಾಂತ್ರಿಕ ಸಲಹಾ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 177 ಕೆಎಂಯು 2013 ದಿನಾಂಕ 3–9–2013ರ ಮೇರೆಗೆ ರಚಿಸಿ ದಿನಾಂಕ 31–3–2015ರವರೆಗೆ ಮುಂದುವರಿಸಿ ಆದೇಶಿಸಿದೆ.

1. ಶ್ರೀ ಜಿ. ಅಶ್ವಥನಾರಾಯಣ, ನಿವೃತ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
2. ಡಾ: ಹೆಚ್.ಎಂ.ಸಿದ್ದನಗೌಡರ್ ನಿವೃತ್ತ ನಿರ್ದೇಶಕರು (ವಸ್ತುಸಂಗ್ರಹಾಲಯ) ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ.
3. ಶ್ರೀ ಅಬೀಬುಲ್ಲಾ, ನಿವೃತ್ತ ಅಧೀಕ್ಷಕರು, ಪುರಾತತ್ವ ಇಂಜಿನಿಯರ್, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ

**35. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ :**

ಈ ಇಲಾಖೆಯಲ್ಲಿ ಪ್ರಸ್ತುತ 12 ಆಡಿಟ್ ಪ್ಯಾರಾಗಳು ಮತ್ತು 3 ಸಿ.ಎ.ಜಿ ವರದಿಗಳು ಬಾಕಿ ಇವೆ. 2012–13ನೇ ಸಾಲಿನ ಆಡಿಟ್ ಆಗಿದ್ದು, 2013–14ನೇ ಆಡಿಟ್ ಆಗಬೇಕಾಗಿದೆ.

## 36. ಹೊಸ ವಾಹನ ಖರೀದಿ:

ಸರ್ಕಾರದ ಆದೇಶದ ಸಂಖ್ಯೆ: ಕಸಂವಾ 60 ಕೆಎಂಯು 2013 ದಿನಾಂಕ 15–3–2014ರ ಮೇರೆಗೆ ಇಲಾಖಾ ಮುಖ್ಯಸ್ಥರಿಗೆ ರೂ. 6.50 ಲಕ್ಷದಲ್ಲಿ ಹೊಸ ವಾಹನವನ್ನು ಖರೀದಿಸಲಾಯಿತು.

## 37. ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಹುದ್ದೆಗಳ ಪುನರ್ ಸ್ಥಾಪನೆ (ವೃಂದ – ಎ) :

ಸರ್ಕಾರದ ಆದೇಶದ ಸಂಖ್ಯೆ: ಕಸಂವಾಪ್ರ 76 ಕೆಎಂಯು 2012 ದಿನಾಂಕ 18–4–2012 ರಲ್ಲಿ ಸ್ಥಳಾಂತರಿಸಲಾದ ಎರಡು ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಹುದ್ದೆಗಳನ್ನು ಹಿಂದಕ್ಕೆ ಪಡೆದು ಪುನರ್ ಸ್ಥಾಪಿಸಿ ಉಪನಿರ್ದೇಶಕರ ಕಛೇರಿ, ಹಂಪಿ ಮತ್ತು ಬೆಂಗಳೂರಿಗೆ ನಿಯುಕ್ತಿಗೊಳಿಸಿ ನಿಯೋಜನೆ ಮೇಲೆ ಭರ್ತಿ ಮಾಡಲು ಸರ್ಕಾರದ ಆದೇಶದ ಸಂಖ್ಯೆ: ಕಸಂವಾ 55 ಕೆಎಂಯು 2014 ದಿನಾಂಕ 13–3–2014ರಲ್ಲಿ ಆದೇಶಿಸಿದೆ.

## 38. ಮುಂಬಡ್ತಿ :

1. ಶ್ರೀಮತಿ ವಿ.ಎಸ್. ಕಮಲಾಬಾಯಿ, ಸಹಾಯಕ ನಿರ್ದೇಶಕರು, ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು, ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಗೆ (ಗ್ರೂಪ್ –ಎ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಕಸಂವಾ 10 ಕೆಎಂಯು 2013 ದಿನಾಂಕ 27–1–2014ರ ಮೇರೆಗೆ ಸ್ಥಾನಪನ್ನ ಬಡ್ತಿಯನ್ನು ನೀಡಲಾಯಿತು.

2. ಶ್ರೀಮತಿ ಗೌರಮ್ಮ, ಕ್ಯೂರೇಟರ್, ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ (ಗ್ರೂಪ್ – ಬಿ) ಕಛೇರಿ ಆದೇಶದ ದಿನಾಂಕ 8–8–2013ರಲ್ಲಿ ಸ್ಥಾನಪನ್ನ ಬಡ್ತಿಯನ್ನು ನೀಡಲಾಯಿತು.

3. ಶ್ರೀ ಎಂ. ಸುನೀಲ್ ಕುಮಾರ್ – ಸಹಾಯಕ ಕ್ಯೂರೇಟರ್, ಇವರಿಗೆ ಕ್ಯೂರೇಟರ್ ಹುದ್ದೆಗೆ (ಗ್ರೂಪ್ – ಸಿ) ಕಛೇರಿ ಆದೇಶದ ದಿನಾಂಕ 30–8–2013ರಲ್ಲಿ ಸ್ಥಾನಪನ್ನ ಬಡ್ತಿಯನ್ನು ನೀಡಲಾಯಿತು.

**39. ನಿವೃತ್ತಿ :**

2013–14ನೇ ಸಾಲಿನಲ್ಲಿ ಗ್ರೂಪ್ –ಬಿ 1, ಗ್ರೂಪ್ ಸಿ –1 ಗ್ರೂಪ್ 'ಡಿ' –4 ಜನ ಸೇರಿದಂತೆ ಒಟ್ಟಾರೆ 6 ಜನ ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.

**40. ಬ್ಯಾಕ್‌ಲಾಗ್ ಹುದ್ದೆ ನೇಮಕಾತಿ:**

ಶೀಘ್ರಲಿಪಿಗಾರರ ಒಂದು ಹುದ್ದೆ (ಪರಿಶಿಷ್ಟ ಪಂಗಡ) ಮತ್ತು ದ್ವಿತೀಯ ದರ್ಜೆ ಸಹಾಯಕರ ಒಂದು ಹುದ್ದೆ (ಪರಿಶಿಷ್ಟ ಜಾತಿ) ಗೆ ನೇಮಕಾತಿ ಮಾಡಲಾಗಿದೆ.

**41. ಅನುಕಂಪದ ಆಧಾರದ ಮೇಲೆ ನೇಮಕಾತಿ :**

ಗ್ರೂಪ್–ಡಿ ಒಂದು ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ.

ಈ ರೀತಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯ ಚಟುವಟಿಕೆಗಳು ಮುಂದುವರಿಯುತ್ತಿವೆ.

(ಡಾ: ಸಿ.ಜಿ.ಬೆಟಸೂರಮಠ)
ಆಯುಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು